ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

H73

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570006

ಸಂಖ್ಯೆಎಸಿ2(ಎಸ್)34/1990-91

ದಿನಾಂಕ: 06.02.2017

## ಅಧಿಸೂಚನೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಪದವಿ ಕೋರ್ಸ್‌ಗಳ ಎರಡುಪಟ್ಟು ಅವಧಿ ಮುಗಿದ ನಂತರ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನಃ ಪರೀಕ್ಷೆ ಬರೆಯಲು ಅಂತಿಮವಾಗಿ ಅವಕಾಶ ನೀಡುವ ಬಗೆಗೆ.

ಉಲ್ಲೇಖ: 1. ಈ ಕಛೇರಿ ಇದೇ ಸಮಸಂಖ್ಯೆ ಅಧಿಸೂಚನೆ ದಿನಾಂಕ: 31.12.2014.
2. ಈ ಕಛೇರಿ ಇದೇ ಸಮಸಂಖ್ಯೆ ಅಧಿಸೂಚನೆ ದಿನಾಂಕ: 02.02.2016.
3. ದಿನಾಂಕ: 07.01.2017ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ.

******

ದಿನಾಂಕ: 07.01.2016 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ತೀರ್ಮಾನದಂತೆ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ (ವಾರ್ಷಿಕ ಹಾಗೂ ಸೆಮಿಸ್ಟರ್) ಪದ್ಧತಿ ಕೋರ್ಸ್‌ಗಳು (ಬಿ.ಎಡ್ ಹಾಗೂ ಕಾನೂನು ಪದವಿಯ ಆರ್‌ಆರ್, ಸಿಎಸ್‌ಎಸ್ ಮತ್ತು ಐಎಸ್‌ಎಸ್ ಸ್ಕೀಂ ಸೇರಿದಂತೆ) ಮತ್ತು ಡಿಪ್ಲೋಮಾ ಸ್ನಾತಕೋತ್ತರ (Professional Course ಗಳು ಸೇರಿದಂತೆ) ಎಲ್ಲಾ ಕೋರ್ಸ್‌ಗಳಿಗೆ ಅನ್ವಯವಾಗುವಂತೆ 'Double the Duration' ಅವಧಿಯಾದ ನಂತರವು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಳೆಯ ಪಠ್ಯಕ್ರಮದ ರೀತಿಯೇ (ವಿದ್ಯಾರ್ಥಿಗಳು ಹಿಂದೇ ವ್ಯಾಸಾಂಗ ಮಾಡಿದ್ದ ಸ್ಕೀಂ ಹಾಗೂ ಅಭ್ಯಸಿಸಿದ್ದ ಪಠ್ಯಕ್ರಮಕ್ಕೆ ಅನುಗುಣವಾಗಿ) ಪ್ರಸ್ತುತ ಶೈಕ್ಷಣಿಕ ಸಾಲಿನಿಂದಲೇ ಅನ್ವಯಿಸುವಂತೆ ಪುನಃ ಅಂತಿಮವಾಗಿ ಒಂದು ವರ್ಷದ ಅವಧಿಗೆ (ಒಂದು ಪ್ರಯತ್ನವನ್ನು) ಪರೀಕ್ಷೆ ಬರೆಯಲು ಕಟ್ಟಕಡೆಯ ಒಂದು ಕಾಲಾವಕಾಶ ನೀಡಲು ಅನುಮತಿಯನ್ನು ನೀಡಲಾಗಿದೆ. (ಬಿ.ಎಡ್ ಹಾಗೂ ಕಾನೂನು) ಪದವಿ ವಿದ್ಯಾರ್ಥಿಗಳಿಗೆ ಜುಲೈ 2017 ರಲ್ಲಿ ನಡೆಯುವ ಪರೀಕ್ಷೆಗೆ ಒಂದು ಅವಕಾಶ ಮತ್ತು ಇನ್ನಿತರ ಸೆಮಿಸ್ಟರ್ ಮಾದರಿಯ 2, 4 ಮತ್ತು 6ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮೇ/ಜೂನ್ 2017 ರಲ್ಲಿ ಹಾಗೂ 1, 3, ಹಾಗೂ 5ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ನವೆಂಬರ್/ಡಿಸೆಂಬರ್-2017 ರಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಒಂದು ಪ್ರಯತ್ನದಲ್ಲಿ ಪರೀಕ್ಷೆಗಳನ್ನು ಹಾಗೂ ವಾರ್ಷಿಕ ಪದ್ಧತಿ ಕೋರ್ಸ್‌ಗಳಿಗೆ ಮೇ/ಜೂನ್ 2017ರ ಪರೀಕ್ಷೆ ಮಾತ್ರ ಬರೆಯಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಈ ಅವಕಾಶವನ್ನು ಪ್ರಸ್ತುತ ನಡೆಸುವ ಪರೀಕ್ಷೆಗಳಿಗೆ ಆಯಾ ಸ್ಕೀಂಗಳಿಗೆ ಮುಕ್ತಾಯವಾಗುವ ಹಂತದಲ್ಲಿ ಬೋಧಿಸಲಾಗುತ್ತಿದ್ದ ಪಠ್ಯಕ್ರಮವನ್ನು ಅನುಸರಿಸಿ ಪರೀಕ್ಷೆ ಬರೆಯಲು ಅನುಮತಿಯನ್ನು ನೀಡಲಾಗಿದೆ ಎಂಬ ಅಂಶವನ್ನು ಕೂಡ ಸ್ಪಷ್ಟಪಡಿಸಿದೆ.

ಈ ಅಧಿಸೂಚನೆಯಲ್ಲಿ ನೀಡಲಾಗಿರುವ ಹೆಚ್ಚುವರಿ ಅವಕಾಶಕ್ಕಾಗಿ ಪರೀಕ್ಷಾ ಶುಲ್ಕವನ್ನು ಕುಲಸಚಿವ(ಪರೀಕ್ಷಾಂಗ) ರವರು ಪರೀಕ್ಷಾ ಅಧಿಸೂಚನೆಯಲ್ಲಿ ತಿಳಿಸುವಂತೆ ಶುಲ್ಕ ಪಾವತಿಸಲು ಆಯಾ ಕಾಲೇಜು/ಸಂಬಂಧಪಟ್ಟ ಅಧ್ಯಯನ ವಿಭಾಗಗಳಿಂದಲೇ ವಿದ್ಯಾರ್ಥಿಗಳಿಗೆ ತಿಳಿಸುವುದು.

ಕುಲಸಚಿವರಿಂದ ಕರಡು ಅನುಮೋದಿಸಿದೆ

ಉಪಕುಲಸಚಿವ(ಶೈಕ್ಷಣಿಕ)

ಅವರಿಗೆ,

1. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-ರವರಿಗೆ ಮೇಲ್ಕಂಡ ಅಧಿಸೂಚನೆಯಲ್ಲಿನ ಸ್ಕೀಂಗಳಲ್ಲದೆ ಒಂದು ಪಕ್ಷ ಇನ್ನಿತರ ಸ್ಕೀಂ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಸಲ್ಲಿಸಿದಲ್ಲಿ ಅಂತಹವರಿಗೂ ಸಹ ಪರೀಕ್ಷೆ ನಡೆಸಲು ಹಾಗೂ ಶುಲ್ಕದ ಬಗ್ಗೆ ಅಧಿಸೂಚನೆ ಹೊರಡಿಸಲು ಸೂಕ್ತಕ್ರಮವಹಿಸಲು ತಿಳಿಸಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು–1.
5. ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟ ಘಟಕ ಕಾಲೇಜುಗಳ ಹಾಗೂ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ–ಇದನ್ನು ಸಂಬಂಧಿಸಿದ ವಿದ್ಯಾರ್ಥಿಗಳ ಗಮನಕ್ಕೆ ತರಬೇಕಾಗಿ ಕೋರಿದೆ.
5. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಮಾನಸಗಂಗೋತ್ರಿ, ಮೈಸೂರು.
6. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಡ್ಯ, ಹಾಸನ, ಚಾಮರಾಜನಗರ.
7. ನಿರ್ದೇಶಕರು, ಅಂತರರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾ.ಗಂ.ಮೈ.
8. ನಿರ್ದೇಶಕರು, ಪಿ.ಎಂ.ಇ.ಬಿ/ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ನಿರ್ದೇಶಕರು, ಸಿ.ಎಫ್.ಟಿ.ಆರ್.ಐ./ಡಿ.ಎಫ್.ಆರ್.ಎಲ್./ಎ.ಐ.ಐ.ಎಸ್.ಎಚ್(AIISH)/ಸಿ.ಎಸ್.ಆರ್.ಟಿ.ಐ., ಮೈಸೂರು.
10. ಪ್ರೊ. ಹೇಮಂತ್ ಕುಮಾರ್, ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು– ಈ ಅಧಿಸೂಚನೆಯನ್ನು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
11. ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಾರ್ತಾಭವನ,ದಾಸಪ್ಪ ವೃತ್ತ, ಮೈಸೂರು.–ಈ ಅಧಿಸೂಚನೆಯ ಅಂಶವನ್ನು ವಿದ್ಯಾರ್ಥಿಗಳ ಮತ್ತು ಪೋಷಕರ ಅನುಕೂಲಕ್ಕಾಗಿ ಆಗ್ಗಿಂದಾಗ್ಗೆ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ಕೋರಿದೆ (50 ಪ್ರತಿ ಲಗತ್ತಿಸಿದೆ).
12. ನಿಲಯದ ನಿರ್ದೇಶಕರು, ಪ್ರಸಾರ ಭಾರತಿ ಯಾದವಗಿರಿ, ಮೈಸೂರು– ಅವರಿಗೆ ಪ್ರಸ್ತುತ ಅಧಿಸೂಚನೆಯ ಅಂಶಗಳನ್ನು ವಿದ್ಯಾರ್ಥಿಗಳ ಹಾಗೂ ಪೋಷಕರ ಮಾಹಿತಿಗಾಗಿ ರೇಡಿಯೋ ಮತ್ತು ಟಿ.ವಿ.ಗಳಲ್ಲಿ ಆಗ್ಗಿಂದಾಗ್ಗ ಭಿತ್ತರಿಸಬೇಕಾಗಿ ಕೋರಿದೆ.
13. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು–ಸೂಕ್ತ ಕ್ರಮಕ್ಕಾಗಿ.
14. ಉಪ/ಸಹಾಯಕಕುಲಸಚಿವರು/ಅಧೀಕ್ಷಕರು/ಎಲ್ಲಾಕಾರ್ಯನಿರ್ವಾಹಕರು(ಶೈಕ್ಷಣಿಕವಿಭಾಗ/ಪರೀಕ್ಷಾಂಗ ಸ್ನಾತಕ/ ಸ್ನಾತಕೋತ್ತರ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಕುಲಪತಿಗಳ/ಕುಲಸಚಿವರು/ಕುಲಸಚಿವರು(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
16. ಕಛೇರಿ ಪ್ರತಿ.